ಅಸಲು ದಾವಾ ನಂ.272/2022
ಡಿ ಡಬ್ಲು-1

ದಿನಾಂಕಃ 17-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ- ವಾದಿ ಪರ ಶ್ರೀ. ಜಿ ಕೆ ಜಿ ವಕೀಲರಿಂದ.**

ನಾನು ನಮ್ಮ ವಕೀಲರಿಗೆ ಖೊಟ್ಟಿ ಮಾಹಿತಿ ನೀಡಿ ಮಾಯಪ್ಪ ಇವರ ವಾರಸುದಾರರು ಇರುವುದಾಗಿ ಖೊಟ್ಟಿ ವಂಶವೃಕ್ಷ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಂಶವೃಕ್ಷದಲ್ಲಿ ಮಾಯಪ್ಪ ಇವರ ತಂದೆಯ ಹೆಸರನ್ನು ಬೇಕು ಅಂತಲೇ ನಾನು ತೋರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮಾಯಪ್ಪ ಇವರ ತಂದೆಯ ಹೆಸರು ಮಾಯಪ್ಪ ಎಂದು ತೋರಿಸಿರುವುದಾಗಿ ನುಡಿಯುತ್ತಾರೆ. ಸದರಿ ವಂಶವೃಕ್ಷ ಸರಿಯಾಗಿರುತ್ತದೆ ಎಂದು ತೋರಿಸಲು ನಾನು ತಹಶೀಲ್ದಾರ ಇವರಿಂದ ಪಡೆದುಕೊಂಡ ವಂಶವೃಕ್ಷ ಪ್ರಮಾಣ ಪತ್ರ ಮತ್ತು ವಾರಸು ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಹಾಗೇ ಸದರಿ ದಾಖಲೆಗಳನ್ನು ಹಾಜರುಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಯಪ್ಪ ತಂದೆ ಮಾಯಪ್ಪ ಇವರ ವಾರಸುದಾರರ ಕುರಿತು ನ್ಯಾಯಾಲಯದಿಂದ ಪಡೆದುಕೊಂಡ ಡಿಕ್ರಿ ಹಾಜರುಪಡಿಸಿಲ್ಲ. ನಾವುಗಳು ಮಾಯಪ್ಪ ತಂದೆ ಮಾಯಪ್ಪ ಹರಿಜನ ಇವರ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳನ್ನು ಎತ್ತಿ ಹಾಕುವ ಉದ್ದೇಶದಿಂದ ನಾನು ಬೇಕು ಅಂತಲೇ ಖೊಟ್ಟಿ ವಂಶವೃಕ್ಷ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಯಲ್ಲಪ್ಪ ಇವರು ತನ್ನ ದತ್ತಕ ತಂದೆ ತಿರಕಪ್ಪ ಇವರ ವಂಶವೃಕ್ಷವನ್ನು ಕಂದಾಯ ಅಧಿಕಾರಿಗಳಿಂದ ಪಡೆದುಕೊಂಡು ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ಮಾಯಪ್ಪ ತಂದೆ ಮಾಯಪ್ಪ ಇವರ ಅಜ್ಜನ ಹೆಸರು ಮಾಯಪ್ಪ ಇರುತ್ತದೆ. ಮಾಯಪ್ಪನಿಗೆ ಫಕ್ಕೀರಪ್ಪ ಮತ್ತು ದ್ಯಾಮಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಮಾಯಪ್ಪ ಮತ್ತು ದ್ಯಾಮಪ್ಪ ಇವರಿಗೆ ಸಂತತಿ ಇರಲಿಲ್ಲ ಎಂದರೆ ಸರಿಯಲ್ಲ. ಮಾಯಪ್ಪ ಇವರಿಗೆ ದುರಗಪ್ಪ ಮತ್ತು ಕರಿಯಪ್ಪ ಎಂಬ ಇಬ್ಬರು ಮಕ್ಕಳು ಹಾಗೇ ಅವರು ಮಕ್ಕಳು ಎಂದು ತೋರಿಸಲು ನಾನು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮಾಯಪ್ಪ ಇವರಿಗೆ ದುರಗಪ್ಪ ಮತ್ತು ಕರಿಯಪ್ಪ ಎಂಬ ಮಕ್ಕಳು ಇದ್ದರು ಎಂದು ತೋರಿಸಲು ನಾನು ಕಂದಾಯ ಡ ಉತಾರೆಗಳನ್ನು ಹಾಜರುಪಡಿಸಿರುತ್ತೇನೆ.

ಮೊದಲಿಗೆ ಪಹಣಿಗಳನ್ನು ಗ್ರಾಮ ಲೆಕ್ಕಾಧಿಕಾರಿಗಳು ಕೈ ಬರಹದಲ್ಲಿ ಬರೆಯುತ್ತಿದ್ದರು ಎಂದರೆ ಸರಿ. ಹಾಗೇ ಕಂದಾಯ ಡ ಉತಾರೆಗಳು ಯಾವ ಇಸ್ವಿಯವು ಎಂದು ಹೇಳಲು ಬರುವುದಿಲ್ಲ. ದ್ಯಾಮ ಬಿನ್ ಫಕ್ಕೀರ ಮಾದರ, ತಿರಕಾ ಬಿನ್ ಮಾಯಾ ಮಾದರ ಇವರು ಸಹೋದರರು ಎಂದರೆ ಸರಿಯಲ್ಲ. ದ್ಯಾಮ ಇವರಿಗೆ ದ್ಯಾಮಪ್ಪ, ತಿರಕಾ ಇವರಿಗೆ ತಿರಕಪ್ಪ ಎಂದು ರೂಢಿಗತವಾಗಿ ಕರೆಯುತ್ತಿದ್ದರು ಎಂದರೆ ಸರಿ. ಸದರಿ ತಿರಕಪ್ಪ ಮತ್ತು ದ್ಯಾಮಪ್ಪ 1931 ರಲ್ಲಿ ಆಸ್ತಿಗಳಲ್ಲಿ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸರ್ವೇ ನಂ.32 ರ ಒಟ್ಟು ಕ್ಷೇತ್ರ 08 ಎಕರೆ 10 ಗುಂಟೆ ಎಂದರೆ ಸರಿ. ಸದರಿ ಕ್ಷೇತ್ರವು ಜಂಟಿಯಾಗಿ ತಿರಕಪ್ಪ ಮತ್ತು ದ್ಯಾಮಪ್ಪ ಇವರ ಹೆಸರಿಗೆ ಉಳಿಯಿತು ಎಂದರೆ ಸರಿಯಲ್ಲ. ಸಾಕ್ಷಿ 04 ಎಕರೆ 05 ಗುಂಟೆ ತಿರಕಪ್ಪ ಇವರಿಗೆ ಮತ್ತು 04 ಎಕರೆ 05 ಗುಂಟೆ ದ್ಯಾಮಪ್ಪ ಇವರ ಪಾಲಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ.

3. ರಾಯಪ್ಪ ಇವರ ತಂದೆಯ ಹೆಸರು ಗೊತ್ತಿಲ್ಲ. ದುರಗಪ್ಪನ ಅಜ್ಜನ ಹೆಸರು ಫಕ್ಕೀರಪ್ಪ ಇರುತ್ತದೆ. ಕರಿಯಪ್ಪನ ಅಜ್ಜನ ಹೆಸರು ಫಕ್ಕೀರಪ್ಪ ಇರುತ್ತದೆ. ನಾನು ಹೇಳುತ್ತಿರುವ ವಂಶವೃಕ್ಷಕ್ಕೂ ಮತ್ತು ಈಗ ಹೆಸರು ಹಚ್ಚಿಕೊಂಡವರಿಗೂ ಯಾವುದೇ ಹೊಂದಾಣಿಕೆ ಇಲ್ಲ ಎಂದರೆ ಸರಿಯಲ್ಲ. ರಾಯಪ್ಪ ನಮಗೆ ಏನು ಸಂಬಂಧ ಆಗುವುದಿಲ್ಲ. ದುರಗಪ್ಪ ನನ್ನ ದೊಡ್ಡಪ್ಪ ಇರುತ್ತಾರೆ. ಕರಿಯಪ್ಪ ನನ್ನ ತಂದೆ ಇರುತ್ತಾರೆ. ಇವರೆಲ್ಲರೂ ಮೂಲತಃ ಕಳಲಕೊಂಡ ಗ್ರಾಮದವರು ಇರುತ್ತಾರೆ. ಇವರು ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರ ಗ್ರಾಮದವರು ಎಂದರೆ ಸರಿಯಲ್ಲ. ಹಾಗೇ ಅವರು ಲಕ್ಷ್ಮೇಶ್ವರ ಗ್ರಾಮದವರು ಎಂದು ತೋರಿಸಲು ವಾದಿ ಶಾಲಾ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ದುರಗಪ್ಪ, ತಿರಕಪ್ಪ ತಂದೆ ಮಾಯಪ್ಪ ಮಾದರ ಇವರು ಖೊಟ್ಟಿ ದಾಖಲೆಗಳನ್ನು ಸೃಷ್ಠಿಸಿಕೊಂಡು ಡ ನಂಬರ 1564 ಮಂಜೂರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ರಾಯಪ್ಪನ ಹೆಸರು ಸಹ ಸದರಿ ಡ ನಂಬರದಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ರಾಯಪ್ಪ ಇವರು ಮಾಯಪ್ಪ ಇವರಿಗೆ ವಾರಸುದಾರ ಅಲ್ಲದೇ ಇದ್ದರೂ ಸಹ ಅವರ ಹೆಸರು ದಾಖಲು ಆಗಿರುತ್ತದೆ ಎಂದರೆ ಸರಿಯಲ್ಲ. 1973 ರಲ್ಲಿ ನನ್ನ ತಂದೆ ಖೊಟ್ಟಿ ದಾಖಲೆಗಳನ್ನು ಸೃಷ್ಠಿಸಿಕೊಂಡು ರಾಯಪ್ಪ ಇವರ ಹೆಸರಿನೊಂದಿಗೆ ಸದರಿ ಡ

ನಂಬರ ಮಂಜೂರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದುರಗಪ್ಪ, ತಿರಕಪ್ಪ ಮತ್ತು ದುರಗವ್ವ ಇವರು ಸರ್ವೇ ನಂ.32 ರ ಪೈಕಿ 04 ಎಕರೆ 05 ಗುಂಟೆ ಜಮೀನಿಗೆ ಮಾಯಪ್ಪ ಇವರ ವಾರಸುದಾರರು ಅಲ್ಲದೇ ಇದ್ದರೂ ಸಹ ಖೊಟ್ಟಿಯಾಗಿ ತಮ್ಮ ಹೆಸರನ್ನು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದುರಗವ್ವ ಇವಳು ದೇವದಾಸಿ ಹೆಣ್ಣುಮಗಳು ಇದ್ದು, ಅವರ ತಾಯಿಯ ಹೆಸರು ನೀಲವ್ವ ಇರುತ್ತದೆ. ದ್ಯಾಮಪ್ಪ ಮತ್ತು ಫಕ್ಕೀರಪ್ಪ ಇವರು ತಿರಕಪ್ಪ ಇವರಿಗೆ ವಾರಸುದಾರರು ಆಗುವುದಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಕಂದಾಯ ಅಧಿಕಾರಿಗಳನ್ನು ಸಂಗನಮತ ಮಾಡಿಕೊಂಡು ಅವರು ತಮ್ಮ ಹೆಸರನ್ನು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ತಿರಕಪ್ಪ ಈತ 1977 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ತಿರಕಪ್ಪ ಇವರ ವಾರಸುದಾರ ದತ್ತಕ ಮಗ ವಾದಿ ಎಂದರೆ ಸರಿ. ಆ ಪ್ರಕಾರ ವಾದಿಯ ಹೆಸರು 1964 ರಲ್ಲಿ ದಾವಾ ಆಸ್ತಿಯ ಪಹಣಿಗೆ ಆತನ ಹೆಸರು ಹತ್ತಿರುತ್ತದೆ ಎಂದರೆ ಸರಿಯಲ್ಲ. ದ್ಯಾಮಣ್ಣ 1976 ರಲ್ಲಿ ತೀರಿಕೊಂಡಿರುತ್ತಾನೆ. ಅವರ ಮದುವೆಯಾಗಿರಲಿಲ್ಲ ಎಂದರೆ ಸರಿ. ದ್ಯಾಮಣ್ಣನಿಗೆ ತಿರಕಪ್ಪ ಇವರನ್ನು ಬಿಟ್ಟು ಬೇರೆ ಯಾರು ಸಹೋದರ, ಸಹೋದರಿ ಇರಲಿಲ್ಲ ಎಂದರೆ ಸರಿಯಲ್ಲ. ದ್ಯಾಮಣ್ಣ ಇವರ ಸಹೋದರ ಮಾಯಪ್ಪ ಇರುತ್ತಾರೆ. ದ್ಯಾಮಣ್ಣ ಮತ್ತು ಫಕ್ಕೀರಪ್ಪ ಮಾತ್ರ ಮಾಯಪ್ಪನ ಮಕ್ಕಳು ಎಂದರೆ ಸರಿಯಲ್ಲ. ಫಕ್ಕೀರಪ್ಪ ಇವರ ಅಜ್ಜನ ಹೆಸರು ಮಾಯಪ್ಪ ಇರುತ್ತದೆ. ಫಕ್ಕೀರಪ್ಪ ನನ್ನ ತಮ್ಮ ಇರುತ್ತಾರೆ. ಫಕ್ಕೀರಪ್ಪ ಮಾಯಪ್ಪನ ವಾರಸುದಾರ ಎಂದು ಖೊಟ್ಟಿಯಾಗಿ ನಿರೂಪಿಸಿ ಡ ನಂಬರ 2082 ಮಂಜೂರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನೀಲವ್ವ ಕೋಂ. ದುರಗಪ್ಪ ಮಾದರ, ದ್ಯಾಮವ್ವ ಕೋಂ. ಶಿವಪ್ಪ ಹರಿಜನ, ಮಾಯಪ್ಪ ತಂದೆ ದುರಗಪ್ಪ ಹರಿಜನ, ಸಾಮವ್ವ ಕೋಂ. ಕರಬಸಪ್ಪ ಹರಿಜನ, ನಿಂಗವ್ವ ಕೋಂ. ಯಲ್ಲಪ್ಪ ಹರಿಜನ ಇವರು ದುರಗಪ್ಪನ ವಾರಸುದಾರರು ಇರುತ್ತಾರೆ. ಸುರೇಶ, ಫಕ್ಕೀರಪ್ಪ, ಈರವ್ವ, ದುರಗವ್ವ ಇವರು ಕರಿಯಪ್ಪನ ವಾರಸುದಾರರು ಇರುತ್ತಾರೆ. ಪ್ರತಿವಾದಿ ನಂ.11 ರಿಂದ 14 ದಾವಾ ಆಸ್ತಿಗಳಿಗೆ ಏನು ಸಂಬಂಧ ಇಲ್ಲದೇ ಇದ್ದರೂ ಸಹ 2011 ರಲ್ಲಿ ಖೊಟ್ಟಿಯಾಗಿ ಪಹಣಿಗೆ ತಮ್ಮ ಹೆಸರುಗಳನ್ನು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1976

ಅಸಲು ದಾವಾ ನಂ.272/2022
ಡಿ ಡಬ್ಲು-1

ರಕ್ಕಿಂತಲೂ ಮೊದಲು ನನ್ನ ತಂದೆ ಮಾಯಪ್ಪ ಇವರ ವಾರಸುದಾರರು ಅಲ್ಲದೇ ಇದ್ದರೂ ಸಹ ಖೊಟ್ಟಿಯಾಗಿ ತನ್ನ ಹೆಸರನ್ನು ಹಚ್ಚಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ವಾದಿ ಅನಕ್ಷರಸ್ಥ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).